ಹತ್ತು ವರ್ಷಗಳ ಹಿಂದೆ ಮೈತುಂಬಾ ಬಲೂನುಗಳನ್ನು ತುಂಬಿಕೊಂಡು ನಡೆಯುತ್ತಿರಬೇಕಾದರೆ ಕಾರೊಂದು ಡಿಕ್ಕಿ ಹೊಡೆದು ನೆಲಕ್ಕುರುಳಿದವನು ಜೀವಂತವಾಗಿ ಮೇಲೇಳಲಿಲ್ಲ, ಅಷ್ಟೇ. ಹೈಸ್ಕೂಲು ಮೊದಲನೆಯ ವರ್ಷದಲ್ಲಿ ಓದುತ್ತಿದ್ದ ಸಲೀಂ ಬದುಕಿಗಾಗಿ ಸ್ಕೂಲು ಬಿಟ್ಟು ಚಾರ್ಮಿನಾರ್ ಮಡಿಲಿಗೆ ಬಿದ್ದು ಬಿಟ್ಟ. ಅಮ್ಮ ಮತ್ತು ತನ್ನ ಬೆನ್ನಿಗೆ ಬಿದ್ದ ಇಬ್ಬರು ತಂಗಿಯರ ಜವಾಬ್ದಾರಿ ಅವನ ಹೆಗಲಿಗೇರಿತ್ತು. ಬೆಳಗ್ಗೆ ಎಂಟು ಗಂಟೆಗೆ ಮನೆ ಬಿಟ್ಟರೆ ರಾತ್ರಿ ಒಂಬತ್ತು ಗಂಟೆಗೆ ಮನೆ ಸೇರುವುದು. ವ್ಯಾಪಾರದಲ್ಲಿ ಟೈಮು ಹೋಗುವುದೇ ಅವನಿಗೆ ಗೊತ್ತಾಗುವುದಿಲ್ಲ. ತಂಗಿಯರಿಗಾಗಿ ಬ್ಯಾಂಕಿನಲ್ಲಿ ದುಡ್ಡು ಕೂಡಿಟ್ಟು ಅಮ್ಮನಿಂದ, "ಭೇಷ್ ನನ್ನ ಬಂಗಾರದ ಬೇಟಾ" ಎಂದು ಅನ್ನಿಸಿಕೊಂಡಿದ್ದಾನೆ. ವಾರದಲ್ಲಿ ನಾಲ್ಕು ದಿನ ಚಾರ್ಮಿನಾರ್ ಹತ್ತಿರ ವ್ಯಾಪಾರ ಮಾಡಿದರೆ ಇನ್ನು ಮೂರು ದಿನ ಗೋಲ್ಕೊಂಡ, ಬಿರ್ಲಾ ಮಂದಿರ, ಹುಸೇನ್ ಸಾಗರದ ಬಳಿ ವ್ಯಾಪಾರ ಮಾಡುತ್ತಾನೆ. ವ್ಯಾಪಾರ ಮಾಡುವಾಗ ಸಲೀಂ ಯಾವೊತ್ತೂ ಮುಖ ಗಂಟಿಕ್ಕಿಕೊಂಡು ಮಾತನಾಡಿದವನಲ್ಲ, ಸಹ ವ್ಯಾಪಾರಿಗಳೊಂದಿಗೆ ಜಗಳ ಕಾದವನಲ್ಲ. ತನ್ನ ಎದುರಿಗೆ ಯಾರಾದರೂ ಜಗಳವಾಡುತ್ತಿದ್ದರೆ ಎರಡೂ ಕಡೆಯವರಿಗೆ ಬುದ್ಧಿ ಹೇಳಿ ಸಮಾಧಾನಪಡಿಸುತ್ತಾನೆ. ಹಾಗಾಗಿ ಹಿರಿಯರು ಕೂಡ ಸಲೀಮನಿಗೆ ಮರ್ಯಾದೆ ಕೊಡುತ್ತಾರೆ. ಪ್ರತಿ ಶುಕ್ರವಾರ ತಪ್ಪದೆ ಮಸೀದಿಗೆ ಹೋಗಿ ನಮಾಜು ಮಾಡುತ್ತಾನೆ. ಮಿಕ್ಕ ದಿನಗಳಲ್ಲಿ ಮಾಮೂಲಿಯಾಗಿ ತನ್ನ ವ್ಯಾಪಾರದಲ್ಲಿ ತೊಡಗಿರುತ್ತಾನೆ. ಯಾರಾದರೂ ಆ ಬಗ್ಗೆ ಹೇಳಿದರೆ, "ದುಡಿಮೆಯೇ ದೇವರು ಅಂತ ನಮ್ಮ ಗಾಂಧಿ ತಾತ ಹೇಳಿಲ್ವಾ. ಯಾರಿಗಾದರೂ ಕೆಟ್ಟದ್ದನ್ನು ಮಾಡದಿರುವುದೇ ದೊಡ್ಡ ಪ್ರಾರ್ಥನೆ..." ಎಂದು ತಿಳಿದವರಂತೆ ಮಾತನಾಡುತ್ತಾನೆ. ಪೊಲೀಸರಾಗಲೀ, ಕಾರ್ಪೊರೇಶನ್ನಿನವರಾಗಲೀ ಸಲೀಮನಿಗೆ ಹೆಚ್ಚಾಗಿ ಕಾಟ ಕೊಡುವುದಿಲ್ಲ.

ಅದೊಂದು ಭಾನುವಾರ ಬೆಳಗ್ಗೆ ಸಲೀಂ ಒಂಬತ್ತು ಗಂಟೆಗೆಲ್ಲಾ ಚಾರ್ಮಿನಾರಿನಿಂದ ಬಂದು ಗೋಲ್ಕೊಂಡದ ಹತ್ತಿರ ತನ್ನ ಅತ್ತರಿನ ದುಖಾನು ಹರಡಿಕೊಂಡಿದ್ದ. ಗೋಲ್ಕೊಂಡ ಹೈದರಾಬಾದಿನಿಂದ ಹೊರಗಿರುವುದರಿಂದ ಹೈದರಾಬಾದ್‌ಗೆ ಬರುವ ಎಲ್ಲಾ ಪ್ರವಾಸಿಗರೂ ಗೋಲ್ಕೊಂಡ ನೋಡಲು ಬರುವುದಿಲ್ಲವಾದರೂ ಸಾಮಾನ್ಯವಾಗಿ ಭಾನುವಾರಗಳಂದು, ಇನ್ನಿತರ ರಜಾ ದಿನಗಳಂದು ಗೋಲ್ಕೊಂಡಕ್ಕೆ ಬಂದು ಹೋಗುವವರ ಸಂಖ್ಯೆ ಅಧಿಕವಾಗಿಯೇ ಇರುತ್ತದೆ. ಲೋಕಲ್ ಜನರು, ಯುವ ಪ್ರೇಮಿಗಳು, ಕದ್ದು ಮುಚ್ಚಿ ಪ್ರೇಮಿಸುವವರು ಗೋಲ್ಕೊಂಡವನ್ನು ತುಂಬಾ ಇಷ್ಟ ಪಡುತ್ತಾರೆ. ಇಲ್ಲಿ ವಾರಕ್ಕೊಂದಾದರೂ ಸಿನಿಮಾ ಶೂಟಿಂಗ್ ನಡೆಯುತ್ತಿರುತ್ತದೆ. ಗೈಡುಗಳಂತೂ ಭಾನುವಾರದಂದು ತುಂಬಾನೆ ಬಿಜಿ ಇದ್ದು ಜೇಬುಗಳನ್ನು ತುಸು ಹೆಚ್ಚಾಗಿಯೇ ತುಂಬಿಸಿಕೊಳ್ಳುತ್ತಾರೆ. ಸಲೀಮನಿಗೆ ಗೈಡುಗಳೆಲ್ಲರ ಪರಿಚಯವಿದ್ದರೂ ತುಂಬಾ ಕ್ಲೋಸ್ ಆಗಿರುವುದು ಮಾತ್ರ ನರಸಿಂಹ ಚೌಧರಿ. ಕಾರಣ ಗೋಲ್ಕೊಂಡ ಕೋಟೆಯ ಪ್ರವೇಶ ದ್ವಾರದಲ್ಲಿರುವ ಇನ್ನೂರೈವತ್ತು ಕೇಜಿಯ ಸೀಸದ ಗುಂಡು! ಅದಕ್ಕೊಂದು ಬಳೆಯಿದೆ. ಕೋಟೆ ಪ್ರವೇಶ ಮಾಡುವ ಶಕ್ತಿಯುಳ್ಳ ಯುವಕರು ಮತ್ತು ಗಂಡಸರು ಆ ಗುಂಡನ್ನು ಎತ್ತಲು ಪ್ರಯತ್ನಿಸುತ್ತಾರೆ. ಕೆಲವರಿಗೆ ಅದನ್ನು ಅಲುಗಾಡಿಸಲೂ ಸಾಧ್ಯವಾಗುವುದಿಲ್ಲ. ಕೆಲವರು ಅಲುಗಾಡಿಸಿದರೆ, ಮತ್ತೆ ಕೆಲವರು ಒಂದಿಂಚು ಎರಡಿಂಚು ಎತ್ತುತ್ತಾರೆ. ಹಾಗೆ ಎತ್ತುವಾಗ ಎಷ್ಟೋ ಜನರ ನಡು ಹಿಡಿದುಕೊಂಡಿದೆ, ಎಷ್ಟೋ ಜನರಿಗೆ ಸ್ನಾಯು ಸೆಳೆತ ಉಂಟಾಗಿದೆ. ಅಂಥ ಯುವಕರ ಗುಂಪಿಗೇನಾದರೂ ನರಸಿಂಹ ಚೌಧರಿ ಗೈಡಾದರೆ ಅವರಿಗೆ, "ನನ್ನ ತಮ್ಮನೊಬ್ಬನಿದ್ದಾನೆ, ಈ ಗುಂಡನ್ನು ಅರ್ಧ ಅಡಿ ಮೇಲಕ್ಕೆ ಎತ್ತುತ್ತಾನೆ. ಬೆಟ್ಟಿಂಗ್ ಏನಿರಲಿ..." ಎಂದು ಸಣ್ಣ ಸವಾಲು ಎಸೆಯುತ್ತಾನೆ. ದುಡ್ಡಿರುವವರು ಸಾವಿರ, ಎರಡು ಸಾವಿರ ಎಂದು ಪ್ರತಿಸವಾಲು ಎಸೆಯುತ್ತಾರೆ. ಆಗ ನರಸಿಂಹ ಚೌಧರಿ ಸಲೀಮನನ್ನು ಕರೆಯುತ್ತಾನೆ. ಸಲೀಂ ಹೋಗಿ ಸೀಸದ ಗುಂಡಿನ ಆ ಕಡೆ ಈ ಕಡೆ ಕಾಲುಗಳನ್ನು ಅಗಲಿಸಿ ನಿಂತು, ಗುಂಡಿನ ಬಳೆಗೆ ಎರಡೂ ಕೈಗಳ